**ಪ್ರಕಟಣೆಗಾಗಿ**

# "ಪರಬ್ರಹ್ಮವನ್ನು ಅರಿಯುವುದೇ ಜೀವನದ ಪರಮ ಗುರಿ"

ಪೂಜ್ಯಶ್ರೀ ಸಿದ್ಧೇಶ್ವರ ಸ್ವಾಮೀಜಿ

**ಸುತ್ತೂರು:** ಪರಬ್ರಹ್ಮವನ್ನು ಅರಿಯುವುದೇ ಜೀವನದ ಪರಮ ಗುರಿಯಾಗಿರಬೇಕೆಂದು ಪೂಜ್ಯಶ್ರೀ ಸಿದ್ದೇಶ್ವರ ಮಹಾಸ್ವಾಮಿಗಳು ತಿಳಿಸಿದರು. ಅವರು ಸುತ್ತೂರು ಶ್ರೀಕ್ಷೇತ್ರದಲ್ಲಿ ಏಪ್ರಿಲ್–7 ಭಾನುವಾರದಂದು 2ನೆಯ ಪ್ರವಚನ ನೀಡಿದರು.

ಋಷಿಗಳು ಪರಬ್ರಹ್ಮವನ್ನು ಕುರಿತು ಚರ್ಚಿಸುತ್ತಿದ್ದರು. ಒಬ್ಬರು ಋಷಿಗಳು ದೇಶ ಮತ್ತು ಕಾಲ ಅನಂತವಾಗಿದೆ, ಜಗತ್ತಿನಲ್ಲಿ ಎಲ್ಲವೂ ಕಾಲದಲ್ಲಿ ಹುಟ್ಟಿ, ಕಾಲದಲ್ಲಿಯೇ ಅಂತ್ಯವಾಗುವುದರಿಂದ ಕಾಲವನ್ನು ಬ್ರಹ್ಮನೆಂದು ತಿಳಿಯಬೇಕೆಂದು ಹೇಳಿದರು. ಇನ್ನೊಬ್ಬ ಋಷಿಗಳು ಪಂಚ ಭೂತಗಳೆ ಬ್ರಹ್ಮ, ಏಕೆಂದರೆ ಎಲ್ಲವೂ ಇದರಿಂದಲೇ ಉತ್ಪನ್ನವಾಗಿ ಇದರಲ್ಲೆ ಲೀನವಾಗುವುದು ಎಂದರು. ಮತ್ತೊಬ್ಬ ಋಷಿಗಳು ಇಂದ್ರಿಯಗಳಿಂದ ಎಲ್ಲವೂ ತಿಳಿದುಬರುತ್ತದೆ. ಇಂದ್ರಿಯ ಹಾಗೂ ಮನಸ್ಸಿನ ಸಾಮರ್ಥ್ಯ ಸೀಮಿತವಾದುದು. ಆದ್ದರಿಂದ ಮೌನವಾಗಿದ್ದು ಬ್ರಹ್ಮವನ್ನು ತಿಳಿಯುವ ಪ್ರಯತ್ನ ಮಾಡೋಣ, ಅದು ದೇಶ ಮತ್ತು ಕಾಲ ಮೀರಿ ಇರುವಂತದ್ದು ಹೀಗಾಗಿ ಆ ಆತ್ಮ ಶಕ್ತಿಯನ್ನು ಧ್ಯಾನಿಸಿ ಅರಿಯೋಣ ಎಂದರು. ಎಲ್ಲರೂ ಧ್ಯಾನಾಸಾಕ್ತರಾದರು. ಆಗ ಬ್ರಹ್ಮ (ಸತ್ಯವಸ್ತು) ಗೋಚರವಾಯಿತು. ಇಂದ್ರಿಯಗಳು ಹಾಗೂ ಮನಸ್ಸಿಗೆ ಅದು ಅಗೋಚರ, ಅಗ್ರಾಹ್ಯ, ಅಗಮ್ಯ– ಅತಿ ಸೂಕ್ಷ್ಮ ವಸ್ತುಗಳಲ್ಲೂ ಅಡಗಿದೆ. ಅತಿ ಅಗಾಧ ವಸ್ತುಗಳಲ್ಲೂ ಅಡಗಿದೆ. ಅದು ನಿರಾಕಾರವಾದುದ್ದು. ಅದುವೆ ನಿತ್ಯ ಪರ ಬ್ರಹ್ಮ.

ವ್ಯಕ್ತಿಯೊಬ್ಬ ಪೂರ್ವ ಹಾಗೂ ಪಶ್ಚಿಮ ದಿಕ್ಕುಗಳು ಸಂಧಿಸುವುದನ್ನು ನೋಡಬೇಕೆಂದು ಗಗನದಂಚಿನತ್ತ ಸಾಗುತ್ತಿದ್ದನು. ಹಾದಿಯಲ್ಲಿ ಸಂತರೊಬ್ಬರು ಎತ್ತ ಹೊರಟಿರೆಂದು ಪ್ರಶ್ನಿಸಿದರು. ಉದ್ದೇಶ ತಿಳಿದು ಹೇಳಿದರು. ನೀನು ನಿಂತಿರುವ ಎಡಗಡೆಯೇ ಪೂರ್ವ. ಬಲಗಡೆಯೇ ಪಶ್ಚಿಮ. ನೀನು ನಿಂತಿರುವ ಸ್ಥಳವೇ ಎರಡೂ ದಿಕ್ಕುಗಳು ಸಂಧಿಸುವ ಸ್ಥಳವಾಗಿದೆ ಎಂದು ಹೇಳಿದರು. ಹಾಗೆಯೇ ನಾವಿರುವಲ್ಲಿಯೇ ಬ್ರಹ್ಮನಿದ್ದಾನೆ ಎಂದು ನುಡಿದರು.

ಈ ವಿಶೇಷ ಕಾರ್ಯಕ್ರಮದಲ್ಲಿ ಸುತ್ತೂರು ಹಾಗೂ ಮೈಸೂರಿನ ಆಧ್ಯಾತ್ಮಿಕ ಜಿಜ್ಞಾಸುಗಳು ಭಾಗವಹಿಸಿದ್ದರು. ಮುಂದಿನ ವಿಶೇಷ ಉಪನ್ಯಾಸ ಏಪ್ರಿಲ್ 28 ರಂದು ಇರುತ್ತದೆ. ಆಸಕ್ತರು ಇದರ ಪ್ರಯೋಜನ ಪಡೆಯಬಹುದಾಗಿದೆ.



ಇದೇ 07ರ ಭಾನುವಾರದಂದು ಸುತ್ತೂರು ಶ್ರೀಕ್ಷೇತ್ರದಲ್ಲಿ ವಿಜಯಪುರ ಜ್ಞಾನಯೋಗಾಶ್ರಮದ ಪೂಜ್ಯ ಶ್ರೀ ಸಿದ್ಧೇಶ್ವರ ಮಹಾಸ್ವಾಮೀಜಿಯವರು ಪ್ರವಚನವನ್ನು ನೀಡುತ್ತಿರುವುದು. ಚಿತ್ರದಲ್ಲಿ ಪ್ರವಚನದಲ್ಲಿ ಭಾಗವಹಿಸಿದ್ದ ಆಧ್ಯಾತ್ಮಿಕ ಜಿಜ್ಞಾಸುಗಳನ್ನು ಕಾಣಬಹುದು.